ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಿಯಾಶೀಲ ಆಡಳಿತ

# ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ ರೊದ್ದ ರಸ್ತೆ, ಧಾರವಾಡ

ಸಂಖ್ಯೆ: ಸಿ10/ಸ.ಪ್ರೌ.ಆ/ವರ್ಗಾ/23/2015-16 ದಿನಾಂಕ: 20-08-2015

ವರ್ಗಾವಣೆ ತುರ್ತು ಕ್ರಮ

ಗೆ,

ವಿಭಾಗದ ಎಲ್ಲ ಉಪನಿರ್ದೇಶಕರು(ಆಡಳಿತ),

ಸಾರ್ವಜನಿಕ ಶಿಕ್ಷಣ ಇಲಾಖೆ.

ವಿಷಯ: 2015-16 ನೇ ಸಾಲಿನ ಪ್ರೌಢ ಶಾಲಾ ಸಹ ಶಿಕ್ಷಕರ ಘಟಕದೊಳಗಿನ ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ಕೌನ್ಸಿಲಿಂಗ್ ದಿನಾಂಕಗಳನ್ನು ನಿಗದಿ ಪಡಿಸಿದ ಕುರಿತು ವೇಳಾಪಟ್ಟಿ.

ಉಲ್ಲೇಖ: ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ರವರ ಅಧಿಕೃತ ಜ್ಞಾಪನ ಸಂಖ್ಯೆ:ಸಿ3(7) ಪ್ರಾಶಾವರ್ಗ/01/2015-16 ದಿನಾಂಕ:-26-06-2015.

******

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2015-16ನೇ ಸಾಲಿನ ಪ್ರೌಢ ಶಾಲಾ ಸಹ ಶಿಕ್ಷಕರು/ದೈಹಿಕ ಶಿಕ್ಷಕರ/ವಿಶೇಷ ಶಿಕ್ಷಕರ ಘಟಕದೊಳಗಿನ ವರ್ಗಾವಣೆಗೆ ಸಂಬಂಧಿಸಿದಂತೆ ಈ ಕೆಳಕಾಣಿಸಿದಂತೆ ವೇಳಾಪಟ್ಟಿಯನ್ನು ನಿಗದಿ ಪಡಿಸಲಾಗಿದೆ. ಸದರ ವೇಳಾಪಟ್ಟಿಯನ್ನು ಶಿಕ್ಷಕರ ಗಮನಕ್ಕೆ ತರಲು ಸೂಚಿಸಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಕೌನ್ಸಿಲಿಂಗ್ ದಿನಾಂಕ | ಆದ್ಯತಾ ಪಟ್ಟಿಯ ಕ್ರಮ ಸಂಖ್ಯೆ |
|---|---|---|---|
| 1 | ಪ್ರೌಢಶಾಲಾ ಸಹಶಿಕ್ಷಕರು | 23-8-2015 | 01 ರಿಂದ 400 |
| 2 | ಪ್ರೌಢಶಾಲಾ ಸಹಶಿಕ್ಷಕರು | 24-08-2015 | 401ರಿಂದ 1100 |
| 3 | ಪ್ರೌಢಶಾಲಾ ಸಹಶಿಕ್ಷಕರು | 25-08-2015 | 1101ರಿಂದ 1633 |
| 4 | ಪ್ರೌಢಶಾಲಾ ದೈಹಿಕ ಶಿಕ್ಷಕರು | 25-08-2015 | 01 ರಿಂದ 208 |
| 5 | ವಿಶೇಷ ಶಿಕ್ಷಕರು | 25-08-2015 | 01 ರಿಂದ 122 |

ಪ್ರತಿದಿನ ಬೆಳಿಗ್ಗೆ 10.00 ಘಂಟೆಯಿಂದ ಆಯಾ ದಿನದ ಆದ್ಯತಾ ಕ್ರಮ ಸಂಖ್ಯೆಯವರೆಗೆ ಕೌನ್ಸಿಲಿಂಗ್ ನಡೆಸಲಾಗುವುದು. ಸಂಬಂಧಿಸಿದ ಶಿಕ್ಷಕರು ಮೇಲಿನ ವೇಳಾಪಟ್ಟಿಯಂತೆ **ಧಾರವಾಡ ಆಯುಕ್ತಾಲಯದ ಆವರಣದಲ್ಲಿರುವ ಡಯಟ್ ಪ್ರಾರ್ಥನಾ ಮಂದಿರದಲ್ಲಿ** ಸಕಾಲದಲ್ಲಿ ವರ್ಗಾವಣೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳೊಂದಿಗೆ ಹಾಜರಿರಲು ತಿಳಿಸುವುದು ಹಾಗೂ ಕೌನ್ಸಿಲಿಂಗ್ ದಿನಗಳಂದು ಉಪನಿರ್ದೇಶಕರ ಕಛೇರಿಯ ಸಂಬಂಧಿಸಿದ ವಿಷಯ ನಿರ್ವಾಹಕರು ಖಾಲಿ ಹುದ್ದೆ ಮಾಹಿತಿ ಹಾಗೂ ಅಗತ್ಯ ದಾಖಲೆಗಳೊಂದಿಗೆ ಹಾಜರಿರಲು ಸೂಚಿಸಿದೆ ಹಾಗೂ ಕೋರಿಕೆ ವರ್ಗಾವಣೆಗಳ ಬಗ್ಗೆ ಕೌನ್ಸಿಲಿಂಗ್ ನಡೆಯುವ ಸ್ಥಳ ಮತ್ತು ದಿನಾಂಕಗಳನ್ನು ತಮ್ಮ ಕಛೇರಿಯ ಮಾಹಿತಿ ಫಲಕದಲ್ಲಿ ಪ್ರಕಟಿಸಿ ಸ್ಥಳೀಯ ಪತ್ರಿಕೆಗಳಲ್ಲಿ ಮಾಹಿತಿಗಳನ್ನು ಪ್ರಕಟಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

(ಮಮತಾ ಬಿ.ನಾಯಕ),
ಸಹನಿರ್ದೇಶಕರು(ಆಡಳಿತ)(ಪ್ರಭಾರ),
ಹಾಗೂ ವರ್ಗಾವಣಾ ಪ್ರಾಧಿಕಾರಿಗಳು,
ಅಪರ ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

ಪ್ರತಿ ಮಾಹಿತಿಗಾಗಿ: ಈ ಕಛೇರಿಯ ಇ ಆಡಳಿತ ಶಾಖೆಗೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.